**ಮರಣದ ನಂತರ ಮೃತ ದೇಹವನ್ನು ನನ್ನ ಸ್ವಂತ ಇಚ್ಛೆಯಿಂದ ದಾನ ಮಾಡಲು ಬರೆದುಕೊಟ್ಟಿರುವ ವೀಲುನಾಮೆ ಯಾ ಮರಣ ಶಾಸನ ದೃಢೀಕರಣ ಪತ್ರ**

ರಿಗೆ,

**ಕೆ.ಎಸ್ ಹೆಗ್ಡೆ ಮೆಡಿಕಲ್ ಅಕಾಡೆಮಿ, ದೇರಳಕಟ್ಟೆ ಮಂಗಳೂರು**

______________________________ ಎಂಬ ಹೆಸರಿನ ನಾನು ದಿನಾಂಕ ______________ ರಂದು

ನನ್ನ ಸ್ವಂತ ಇಚ್ಛೆಯಿಂದ ಬರೆದು ಕೊಟ್ಟಿರುವ ವೀಲು ನಾಮೆ ಯಾ ಮರಣ ಶಾಸನ ದೃಢೀಕರಣ ಪತ್ರ, ನನ್ನ ಮರಣಾ ನಂತರ ಮೃತ ದೇಹವನ್ನು 24 ತಾಸುಗಳ ಒಳಗಾಗಿ ಅನಾಟಮಿ ವಿಭಾಗ, ಕೆ.ಎಸ್, ಹೆಗ್ಡೆ ಮೆಡಿಕಲ್ ಅಕಾಡೆಮಿ , ಸಂಸ್ಥೆಗೆ ವೈದ್ಯಕೀಯ ವಿದ್ಯಾರ್ಥಿಗಳ ಪ್ರಯೋಗಕ್ಕಾಗಿ ನೀಡಲು ಹಾಗೂ ಅವರು ಅದನ್ನು ತಮಗೆ ಬೇಕಾದ ರೀತಿಯಲ್ಲಿ ಉಪಯೋಗಿಸಲು ನನ್ನ ಸಂಪೂರ್ಣ ಒಪ್ಪಿಗೆಯನ್ನು ನೀಡಿ ಈ ಕೆಳಗಿನ ಸಾಕ್ಷಿದಾರರ ಸಮ್ಮುಖದಲ್ಲಿ ಸಹಿ ಹಾಕಿರುತ್ತೇನೆ. ಈ ವೀಲು ನಾಮೆಯನ್ನು ಯಾರ ಪ್ರೇರಣೆ ಅಥವಾ ಯಾರ ಒತ್ತಾಯದಿಂದಲೂ ಮಾಡಿರುವುದಿಲ್ಲ.

ಹೆಸರು :

ವಿಳಾಸ: ಸಹಿ:

ದೂರವಾಣಿ ಸಂಖ್ಯೆ:

ಸಾಕ್ಷಿದಾರರಲ್ಲಿ ಎರಡು ಜನ ರಕ್ತ ಸಂಬಂಧಿಗಳಾಗಿರಬೇಕು ಹಾಗೂ ಉಳಿದೆರಡು ಸಾಕ್ಷಿದಾರರಾಗಿ ಊರಿನ ಗಣ್ಯ ವ್ಯಕ್ತಿಗಳಿಂದ (ಮೃತರಿಗೆ ಸಂಬಂಧವಿರದ ) ಸಹಿ ಹಾಕಿ ಸತಕ್ಕದ್ದು. ಈ ರೀತಿ ಭರ್ತಿ ಮಾಡಿದ ಅರ್ಜಿ ಫಾರಂನ ಒಂದು ಪ್ರತಿಯನ್ನು ನಮ್ಮ ಸಂಸ್ಥೆಯ ವಿಳಾಸಕ್ಕೆ ಅಂಚೆ ಮುಖೇನ ಯಾ ಸ್ವತಃ ಬಂದು ಕೊಟ್ಟು, ಇನ್ನೊಂದನ್ನು ತಮ್ಮ ಬಳಿಯೇ ಇರಿಸುವುದು. ಮರಣ ಹೊಂದಿದ 24 ತಾಸುಗಳ ಒಳಗಾಗಿ ನಮ್ಮ ಸಂಸ್ಥೆಯ ಈ ಕೆಳಗಿನ ದೂರವಾಣಿಗೆ ಸುದ್ದಿ ಮುಟ್ಟಿಸಿದಲ್ಲಿ ನಿಮ್ಮ ವಿಳಾಸದಿಂದ ಮೃತ ದೇಹವನ್ನು ನಮ್ಮ ಸಂಸ್ಥೆಗೆ ತರುವ ಸಂಪೂರ್ಣ ಜವಾಬ್ದಾರಿ ನಮ್ಮದು. ಆದರೆ ದೂರದೂರಿಗೆ ವಾಹನ ಕಳುಹಿಸಲು ತಡವಾಗುವುದರಿಂದ ನೀವೇ ವಾಹನ ಮಾಡಿ ಮೃತದೇಹವನ್ನು ತಂದಲ್ಲಿ ಅದರ ಬಾಡಿಗೆಯನ್ನು ನಮ್ಮ ಸಂಸ್ಥೆಯು ಭರಿಸುತ್ತದೆ.
(ಅನಾಟಮಿ ವಿಭಾಗ ಕೆ. ಎಸ್. ಹೆಗ್ಡೆ ಮೆಡಿಕಲ್ ಅಕಾಡೆಮಿ – 575018,

ದೂರವಾಣಿ ಸಂಖ್ಯೆ : 0824-2204491,2204492)

1. ಸಹಿ :
   ಹೆಸರು :
   ಸಂಬಂಧ :
   ವಿಳಾಸ:
   ದೂರವಾಣಿ ಸಂಖ್ಯೆ:

2. ಸಹಿ :
   ಹೆಸರು :
   ಸಂಬಂಧ :
   ವಿಳಾಸ:
   ದೂರವಾಣಿ ಸಂಖ್ಯೆ:

1. ಸಹಿ:
   ಹೆಸರು :
   ವಿಳಾಸ:
   ದೂರವಾಣಿ ಸಂಖ್ಯೆ:

2. ಸಹಿ:
   ಹೆಸರು :
   ವಿಳಾಸ:
   ದೂರವಾಣಿ ಸಂಖ್ಯೆ:

‘ಕರ್ಮಣ್ಯೇವಾಧೀಕಾರಸ್ತೆ ಮಾಪಲೇಷು ಕದಾಚನ’

ಮಾನ್ಯರೇ,

ಮನುಷ್ಯ ಜನ್ಮ ತಾಳಿದ ನಾವು ಈ ಮಣ್ಣಿನ ಋಣ ತೀರಿಸಲು ಏನಾದರೂ ಒಳ್ಳೆಯ ಕಾರ್ಯ ಮಾಡಿ ಪುನೀತರಾಗಬೇಕು. ನಮಗೆ ಸಮಾಜ ಏನು ಮಾಡಿದೆ ಎನ್ನುವ ಬದಲು ನಾವು ಸಮಾಜಕ್ಕೆ ಏನು ಮಾಡಿದ್ದೇವೆ ಎನ್ನುವುದು ಮುಖ್ಯ. “ ಬರುವಾಗ (ಬೆತ್ತಲೆ) ಹೋಗುವಾಗ (ಕತ್ತಲೆ)” ಎಂಬುದರ ಸಾಕಾರ ರೂಪದಾದ ನಮ್ಮ ದೇಹವು ಮರಣದ ಬಳಿಕ ಸುಟ್ಟು ಬೂದಿಯಾಗಿಯೋ ಅಥವ ಮಣ್ಣಿನೊಡನೆ ಮಣ್ಣಾಗಿಯೋ ಬೆರೆತು ಹೋಗುತ್ತದೆ. ಇಂತಹ ನಶ್ವರವಾದ ದೇಹವನ್ನು ಸದುದ್ದೇಶದಿಂದ, ನಮ್ಮ ಸಂಸ್ಥೆಯಲ್ಲಿ ಕಲಿಯುತ್ತಿರುವ ವೈದ್ಯಕೀಯ ವಿದ್ಯಾರ್ಥಿಗಳ ಪ್ರಯೋಗಕ್ಕಾಗಿ ಬಳಸಲು ನೀಡುವಿರೆಂದು ಆಶಿಸುತ್ತೇವೆ. ದೇಹದಾನ ಮಾಡುವ ಮೂಲಕ ಶ್ರೇಷ್ಠ ದಾನಿಗಳಾಗುವ ನೀವು ಮನುಕುಲದ ಒಳಿತಿಗೆ ಕೊಡುಗೆ ನೀಡುತ್ತಿರುವುದನ್ನು ನೆನೆಯುತ್ತೇವೆ. ಜೀವನದ ಋಣ ತೀರಿಸಲು ಇದೊಂದು ಸದವಕಾಶ.

ಮರಣದ ನಂತರ ಮೃತ ದೇಹವನ್ನು ದಾನ ಮಾಡಲು ನಿಯಮ ನಿಬಂಧನೆಗಳು ಈ ಕೆಳಗಿನಂತಿದೆ.

1. ವೀಲು ನಾಮೆಯನ್ನು ದ್ವಿಪ್ರತಿಯಲ್ಲಿ ಭರ್ತಿ ಮಾಡಬೇಕು.

2. ಅರ್ಜಿ ಫಾರಂನಲ್ಲಿ ತಿಳಿಸಿದ ಪ್ರಕಾರ ಅತೀ ಸಮೀಪದ ಸಂಬಂಧಿಕರ ಬಂಧುಗಳ ಗಮನಕ್ಕೆ ತಿಳಿಸಬೇಕು.

3. ಅರ್ಜಿ ಫಾರಂ ಅನ್ನು ದ್ವಿಪ್ರತಿಯಲ್ಲಿ ಸಂಬಂಧಿಕರ ಬಂಧುಗಳ ನಾಲ್ಕು ಮಂದಿಯ ಸಹಿ ಹಾಕಿಸಬೇಕು.

4. ಮರಣ ಹೊಂದಿದ ಕೂಡಲೇ ಈ ಕೆಳಗಿನ ವಿಳಾಸ ಹಾಗೂ ದೂರವಾಣಿ ಮೂಲಕ ಸುದ್ದಿ ತಿಳಿಸತಕ್ಕದ್ದು.

5. ಮೃತ ದೇಹವನ್ನು ನಮ್ಮ ಸಂಸ್ಥೆಗೆ ನಿಮ್ಮಲ್ಲಿಂದಲೇ ವಾಹನ ಮುಖೇನ ತಂದಲ್ಲಿ ವಾಹನದ ಬಾಡಿಗೆಯನ್ನು ನಮ್ಮ ಸಂಸ್ಥೆಯು ನೀಡುವುದು.

6. ಮೃತ ದೇಹದೊಂದಿಗೆ ವೈದ್ಯಾಧಿಕಾರಿಯವರ ಮರಣ ದೃಢೀಕರಣ ಪತ್ರ ಮತ್ತು ನಮ್ಮ ಸಂಸ್ಥೆಯಿಂದ ಕೊಟ್ಟ ನಿಮ್ಮ ಬಳಿ ಮೃತರ ಸಹಿ ಹಾಕಿಟ್ಟಿರುವ ಮರಣ ಶಾಸನದ ಪ್ರತಿ.

7. ವೀಲು ನಾಮೆಯ ಪ್ರತಿಯನ್ನು ಇದರೊಂದಿಗೆ ಲಗ್ತೀಕರಿಸಿದ್ದೇವೆ.